ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೧೪

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೈದನೆಯ ಅಧಿವೇಶನ

## ಗುರುವಾರ, ದಿನಾಂಕ: ೧೦ನೇ ಜುಲೈ ೨೦೧೪

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು

೩. ಗೃಹ ಸಚಿವರು

೪. ನಗರಾಭಿವೃದ್ಧಿ ಸಚಿವರು

---

## ಮಹಾನಗರ ಪಾಲಿಕೆಯಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೧೯೬ (೧೦೬೫) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹುಬ್ಬಳ್ಳಿ – ಧಾರವಾಡ ಮಹಾನಗರ ಪಾಲಿಕೆಯಲ್ಲಿ ವಿವಿಧ ವೃಂದಗಳಲ್ಲಿ ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ; ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಲ್ಲಿ ಬೇರೆ ಇಲಾಖೆಯಿಂದ ನಿಯೋಜನೆಯಲ್ಲಿರುವ ಹಾಗೂ ಪಾಲಿಕೆಯ ಸಿಬ್ಬಂದಿಗಳೆಷ್ಟು ;

(ಆ) ಇದರಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು ; (ವೃಂದವಾರು ಮಾಹಿತಿ ನೀಡುವುದು) ಖಾಲಿ ಇರುವ ಹುದ್ದೆಗಳಲ್ಲಿ ಎಷ್ಟು ಹುದ್ದೆಗಳನ್ನು ಸರ್ಕಾರ ನೇಮಕಾತಿ

ಹಾಗೂ ನಿಯೋಜನೆ ಮೂಲಕ ಭರ್ತಿ ಮಾಡಬೇಕಾಗಿದೆ; ಸರ್ಕಾರದಲ್ಲಿ ಇದು ಯಾವ ಹಂತದಲ್ಲಿದೆ ;

(ಇ) ಇಷ್ಟೆಲ್ಲ ಹುದ್ದೆಗಳು ಖಾಲಿ ಇದ್ದಾಗ ಮಹಾನಗರ ಪಾಲಿಕೆಯಲ್ಲಿ ಯಾವ ರೀತಿಯಿಂದ ಕೆಲಸಗಳು ಪ್ರಗತಿಯಾಗುತ್ತವೆ ?

## ನರ್ಮ್ ಯೋಜನೆಯ ಮೂಲ ಸೌಕರ್ಯ ಅಭಿವೃದ್ಧಿ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೯೭ (೧೧೨೮) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನರ್ಮ್ ಯೋಜನೆಯಡಿ ಮೈಸೂರು ಮಹಾನಗರ ಪಾಲಿಕೆಯ ಮೂಲ ಸೌಕರ್ಯ ಅಭಿವೃದ್ಧಿಗೆ ಈ ಸಾಲಿನಲ್ಲಿ ಮಂಜೂರಾದ ಹಣವೆಷ್ಟು ;

(ಆ) ಈ ಮಂಜೂರಾದ ಹಣದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ ;

(ಇ) ಇಲ್ಲಿಯವರೆವಿಗೂ ಎಷ್ಟು ಉದ್ದೇಶಿತ ಕಾಮಗಾರಿಗಳಿಗೆ ಅನುಮೋದನೆ ದೊರಕಿದೆ ;

(ಈ) ಅನುಮೋದನೆಗೊಂಡ ಎಷ್ಟು ಕಾಮಗಾರಿಗಳು ಪ್ರಾರಂಭಗೊಂಡಿವೆ ; ಇನ್ನೂ ಪ್ರಾರಂಭವಾಗದೇ ಇರುವುದಕ್ಕೆ ಕಾರಣಗಳೇನು ?

## ಗುತ್ತಿಗೆ ಆಧಾರದಲ್ಲಿ ಗಣಿಗಾರಿಕೆ ಪರವಾನಿಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೯೮ (೧೦೮೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೆಂಪು ಕಲ್ಲು ಮತ್ತು ಶಿಲೆ ಕಲ್ಲುಗಳ ಗಣಿಗಾರಿಕೆಗೆ ಗುತ್ತಿಗೆ ಆಧಾರದಲ್ಲಿ ಪರವಾನಿಗೆಯನ್ನು ನೀಡುವಾಗ ವಿಸ್ತೀರ್ಣದ ಮೇಲೆ

ಕೊಡುವುದಕ್ಕಿಂತ ಬಳಕೆಯ ಆಧಾರದಲ್ಲಿ ಶುಲ್ಕ ವಿಧಿಸುವುದರಿಂದ ಸರ್ಕಾರದ ಬೊಕ್ಕಸಕ್ಕೆ ಆಗತಕ್ಕಂತಹ ಕೋಟ್ಯಾಂತರ ರೂಪಾಯಿ ನಷ್ಟವನ್ನು ತಪ್ಪಿಸಲು ಸಾಧ್ಯವಿಲ್ಲವೇ ;

(ಆ) ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಪರವಾನಿಗೆ ಹೊಂದಿರುವ ಪರವಾನಿಗೆದಾರರು ಪೂರ್ಣ ಪ್ರಮಾಣದ ಬಿಲ್ ಅನ್ನು ಬಳಕೆ ಮಾಡದೇ ಇರತಕ್ಕಂತಹುದು ಮತ್ತು ಖರೀದಿದಾರರು ಸಹ ಪೂರ್ಣ ಪ್ರಮಾಣದ ಬಿಲ್ಲನ್ನು ಬಳಕೆ ಮಾಡದೇ ಇರುವುದು ವಾರ್ಷಿಕ ಲೆಕ್ಕಪತ್ರ (ಆಡಿಟ್) ಪರಿಶೋಧನಾ ಮಾಹಿತಿಯ ಪ್ರಕಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ರಾಜ್ಯದಲ್ಲಿ ಗಣಿ ಉತ್ಪನ್ನಗಳನ್ನು ಬಳಸುವ ಪ್ರತಿಯೊಬ್ಬ ಬಳಕೆದಾರರು ತಮಗೆ ಬಂದ ಸ್ವತ್ತಿನ ಮೂಲ ಪ್ರಮಾಣ ಮತ್ತು ಪೂರೈಕೆದಾರರ ವಿವರವನ್ನು ಕಡ್ಡಾಯವಾಗಿ ದಾಖಲಿಸುವಂತೆ ಮಾಡಲು ಸಾಧ್ಯವಿಲ್ಲವೆ ; ಇಲ್ಲವಾದಲ್ಲಿ ಕಾರಣವೇನು ?

## ಸೈನಿಕ ಬೋರ್ಡ್ ರಚನೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೧೯೯ (೧೧೫೬) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ರಾಜ್ಯ ಸೈನಿಕ ಬೋರ್ಡ್ ಮತ್ತು ಜಿಲ್ಲಾ ಸೈನಿಕ ಬೋರ್ಡ್ ರಚಿಸಲು ಇರುವ ಮಾನದಂಡಗಳೇನು ;

(ಆ) ಈ ಮಾನದಂಡಗಳ ಆಧಾರದಲ್ಲಿ ರಾಜ್ಯ ಸೈನಿಕ ಬೋರ್ಡ್ ರಚಿತವಾಗಿದೆಯೇ ;

(ಇ) ರಾಜ್ಯ ಸೈನಿಕ ಬೋರ್ಡ್ ಮತ್ತು ಜಿಲ್ಲಾ ಸೈನಿಕ ಬೋರ್ಡ್‌ಗಳಲ್ಲಿ ಈಗ ಇರುವ ಪ್ರಭಾರ ಹುದ್ದೆಗಳಿಗೆ ಪೂರ್ಣ ಕಾಲದ ನಿರ್ದೇಶಕರನ್ನು ಹಾಗೂ ಇತರ ಸಿಬ್ಬಂದಿಗಳನ್ನು ನೇಮಕ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

## ನಗರಸಭೆ ಯೋಜನೆಯ ಕ್ರಿಯಾ ಯೋಜನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೦೦ (೧೧೪೩) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನಗರಸಭೆಗಳಿಗೆ ಬಿಡುಗಡೆಯಾದ ಅನುದಾನಕ್ಕೆ ಕ್ರಿಯಾ ಯೋಜನೆ ಮಾಡುವಾಗ ಯಾವ ಮಾನದಂಡದಡಿಯಲ್ಲಿ ಮಾಡಲಾಗುತ್ತದೆ ; (ಮಾನದಂಡದ ಪೂರ್ಣ ವಿವರ ನೀಡುವುದು)

(ಆ) ಕಾಮಗಾರಿ ಕೈಗೆತ್ತಿಕೊಳ್ಳುವಾಗ ಯಾವ ರೀತಿಯ ಆದ್ಯತೆ ಮೇಲೆ ಕೈಗೆತ್ತಿಕೊಳ್ಳಲಾಗುತ್ತಿದೆ ? (ಪೂರ್ಣ ವಿವರ ನೀಡುವುದು)

## ಬೋಧಕ/ಬೋಧಕೇತರರಿಗೆ ವೇತನಾನುದಾನ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೨೦೧ (೧೧೩೩) ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಅನುದಾನ ರಹಿತ ಕಾನೂನು ಕಾಲೇಜುಗಳ ಸಂಖ್ಯೆ ಎಷ್ಟು ;

(ಆ) ರಾಜ್ಯದಲ್ಲಿನ ಅನುದಾನ ರಹಿತ ಕಾನೂನು ಕಾಲೇಜುಗಳಲ್ಲಿನ ಬೋಧಕ/ ಬೋಧಕೇತರರಿಗೆ ವೇತನಾನುದಾನ ನೀಡಲು ಸರ್ಕಾರ ನಿರ್ಣಯಿಸಿದೆಯೇ ;

(ಇ) ಹಾಗಾದರೆ, ಇದುವರೆಗೆ ಎಷ್ಟು ಕಾನೂನು ಕಾಲೇಜುಗಳ ಬೋಧಕ/ ಬೋಧಕೇತರರಿಗೆ ವೇತನಾನುದಾನ ನೀಡಲಾಗಿದೆ ;

(ಈ) ಸದರಿ ಸಿಬ್ಬಂದಿಗೆ ವೇತನಾನುದಾನ ನೀಡುವಲ್ಲಿ ಅನುಸರಿಸಿರುವ ಮಾನದಂಡಗಳೇನು ? (ವಿವರಗಳೊಡನೆ)

## ಪೊಲೀಸ್ ಇಲಾಖೆಯಿಂದ ಜನಸಂಪರ್ಕ ಸಭೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೨೦೨ (೧೧೧೧) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿ.ಬಿ.ಎಂ.ಪಿ. ವ್ಯಾಪ್ತಿಯ ವಾರ್ಡ್ ನಂ. ೧೩೦ ಉಲ್ಲಾಳು ವಾರ್ಡ್‌ಗೆ ಸೇರಿದ ಉಲ್ಲಾಳು ಉಪನಗರದಲ್ಲಿ ಗಾಂಜಾವನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಸಂಬಂಧ ಸಾರ್ವಜನಿಕರಿಂದ ದೂರು ದಾಖಲಾಗಿದೆಯೇ ;

(ಇ) ಸದರಿ ಸ್ಥಳದಲ್ಲಿ ಜನವರಿ ೨೦೧೩ರಿಂದೀಚೆಗೆ ಪೊಲೀಸ್ ಇಲಾಖೆಯಿಂದ ಜನಸಂಪರ್ಕ ಸಭೆಯನ್ನು ನಡೆಸಲಾಗಿತ್ತೆ ; ನಡೆಸಿದ್ದಲ್ಲಿ, ಸದರಿ ಸಭೆಯಲ್ಲಿ ಸಾರ್ವಜನಿಕರಿಂದ ಗಾಂಜಾ ಮಾರಾಟದ ಬಗ್ಗೆ ಪ್ರಸ್ತಾಪವಾಯಿತೆ ;

(ಈ) ಪ್ರಸ್ತಾಪವಾಗಿದ್ದಲ್ಲಿ, ಗಾಂಜಾ ಮಾರಾಟವನ್ನು ನಿಲ್ಲಿಸಲು ತೆಗೆದುಕೊಂಡ ಕ್ರಮಗಳೇನು ?

## ಪಶುವೈದ್ಯ ಕಾಲೇಜು ಮತ್ತು ಲಸಿಕೆಗಳು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೨೦೩ (೧೯೪) ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪಶುವೈದ್ಯ ಕಾಲೇಜುಗಳು ಸರ್ಕಾರದ ಮತ್ತು ವಿಶ್ವವಿದ್ಯಾಲಯದ ನಿರಾಸಕ್ತಿ ಹಾಗೂ ನಿರ್ಲಕ್ಷ್ಯ ಧೋರಣೆಯಿಂದ ಮುಚ್ಚುವ ಹಂತ ತಲುಪಿರುವ ಮಾಹಿತಿ ಸರ್ಕಾರಕ್ಕಿದೆಯೇ ;

(ಆ) ಕಳೆದ ಸಾಲಿನಿಂದ ಈವರೆವಿಗೂ ರಾಜ್ಯದಲ್ಲಿ ಕಾಲುಬಾಯಿ ಜ್ವರ ಕಾಯಿಲೆಗೆ ಎಷ್ಟು ಜಾನುವಾರುಗಳು ಹಾನಿಗೀಡಾಗಿವೆ ; ಈವರೆವಿಗೂ ರಾಜ್ಯದ ಎಲ್ಲಾ

ಜಿಲ್ಲೆಗಳಲ್ಲಿ ಈ ಕಾಯಿಲೆಗಾಗಿ ಎಷ್ಟು ಹಣ ಬಿಡುಗಡೆಗೊಳಿಸಲಾಗಿದೆ ; (ಜಿಲ್ಲಾವಾರು ಪೂರ್ಣ ವಿವರ ನೀಡುವುದು)

(ಇ) ರಾಜ್ಯದ ಲಸಿಕೆ ಸಂಸ್ಥೆ, ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯಿಂದ ಲಸಿಕೆ ಖರೀದಿಸಿದೆಯೇ ; ಕಳೆದ ವರ್ಷದಿಂದ ಈವರೆವಿಗೂ ಎಷ್ಟು ಬಗೆಯ ಲಸಿಕೆಗಳನ್ನು ಎಷ್ಟು ಪ್ರಮಾಣದಲ್ಲಿ ಖರೀದಿಸಿದೆ ; ಇದಕ್ಕಾಗಿ ಆ ಸಂಸ್ಥೆಗೆ ಎಷ್ಟು ಹಣ ನೀಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು) ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಗೆ ಲಸಿಕೆ ತಯಾರಿಸಲು ಯಾವ ದಿನಾಂಕದಿಂದ ಪರವಾನಗಿ ನೀಡಲಾಗಿದೆ ; ಪರವಾನಗಿ ನವೀಕರಣಗೊಂಡಿದೆಯೇ ; ಪರವಾನಗಿ ರದ್ದಾಗಿದ್ದರೆ, ನವೀಕರಣಕ್ಕೆ ಮಾಡಿರುವ ಪ್ರಯತ್ನಗಳೇನು ;

(ಈ) ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ೨೦೧೩–೧೪ ಮತ್ತು ೨೦೧೪–೧೫ರ ಸಾಲಿನಲ್ಲಿ ತಯಾರಿಸಿರುವ ಲಸಿಕೆಗಳು ಮತ್ತು ಅದರ ಪ್ರಮಾಣವೆಷ್ಟು ; ಮಾರಾಟ ಮಾಡಿರುವುದರಿಂದ ಗಳಿಸಿದ ಆದಾಯ ಎಷ್ಟು ; ಪಶು ಸಂಗೋಪನಾ ಇಲಾಖೆ ಲಸಿಕೆಗಳನ್ನು ಪಡೆದಿದೆಯೇ ; ಲಸಿಕೆಗಳನ್ನು ವಿತರಿಸಿರುವ ವಿವರ ನೀಡುವುದು ;

(ಉ) ಪಶುವೈದ್ಯಕೀಯ ವಿಶ್ವವಿದ್ಯಾಲಯದ ಕುಲಪತಿಗಳ ಮೇಲೆ ಮಾನ್ಯ ಲೋಕಾಯುಕ್ತರ ತನಿಖೆಯ ಮಾಹಿತಿ ಇದೆಯೇ ; ಸರ್ಕಾರದ ಸಮಜಾಯಿಷಿ ಏನು ; ಮಾನ್ಯ ಲೋಕಾಯುಕ್ತರ ಶಿಫಾರಸ್ಸು ಏನು ; ಅದಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಲೋಕಾಯುಕ್ತ ದಾಳಿಯ ಪ್ರಕರಣಗಳು

**ಶ್ರೀ ರಘುನಾಥ ರಾವ್** ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –

೨೦೪ (೧೧೦೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಯಾವ ಯಾವ ಇಲಾಖೆಗಳಿಂದ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ; ಆ ಸಿಬ್ಬಂದಿಗಳ ಮಾತೃ ಇಲಾಖೆಗಳ ಬಗ್ಗೆ ಮಾಹಿತಿ ನೀಡುವುದು ;

(ಆ) ಈ ಪ್ರಾಧಿಕಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಸರ್ಕಾರಿ/ಓಓಡಿ/ ಹೊರಗುತ್ತಿಗೆ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಹಾಗೇ ಪ್ರಾಧಿಕಾರದಲ್ಲಿ ಆಯುಕ್ತರಿಂದ ಗ್ರೂಪ್ 'ಡಿ' ನೌಕರರವರೆಗೆ ಯಾರ್‍ಯಾರು ಯಾವ ಯಾವ ಶಾಖೆಗಳಲ್ಲಿ ಎಷ್ಟು ಸಿಬ್ಬಂದಿಗಳು ಸೇವೆ ಸಲ್ಲಿಸುತ್ತಿದ್ದಾರೆ ; (ಹೆಸರು ಮತ್ತು ಪದನಾಮಗಳೊಂದಿಗೆ ಪಟ್ಟಿ ನೀಡುವುದು)

(ಇ) ಈ ಪ್ರಾಧಿಕಾರದಲ್ಲಿ ಒಂದೇ ಸ್ಥಳದಲ್ಲಿ ಸುಮಾರು ವರ್ಷಗಳಿಂದ ಅಧಿಕಾರಿಗಳು/ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಕಾರಣವೇನು ; ಈ ಅಧಿಕಾರಿ/ ನೌಕರರುಗಳನ್ನು ಬೇರೆಡೆಗೆ ವರ್ಗಾಯಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು ; (ವಿವರ ನೀಡುವುದು)

(ಈ) ಈ ಪ್ರಾಧಿಕಾರದಲ್ಲಿ ಅಧಿಕಾರಿಗಳು/ನೌಕರರು ಹಗಲಲ್ಲಿ ದರೋಡೆ ಮಾಡುವುದು, ಲಂಚ ಸ್ವೀಕರಿಸುವುದು ಹಾಗೆಯೇ ಪ್ರಾಧಿಕಾರದಲ್ಲಿ ಲೋಕಾಯುಕ್ತ ದಾಳಿಗೆ ಒಳಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅಕ್ರಮ ಆಸ್ತಿ ಹೊಂದಿದ ಅಧಿಕಾರಿ/ನೌಕರರುಗಳೆಷ್ಟು ? (ವಿವರ ನೀಡುವುದು)

## ಹೈದ್ರಾಬಾದ್ – ಕರ್ನಾಟಕ ಪ್ರದೇಶದಲ್ಲಿ ಖಾಲಿ ಇರುವ ಹುದ್ದೆಗಳು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೨೦೫ (೧೧೩೭) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸರ್ಕಾರಿ ಕಛೇರಿಗಳಲ್ಲಿ ಭಾರಿ ಪ್ರಮಾಣದಲ್ಲಿ ವಿವಿಧ ಹುದ್ದೆಗಳು ಖಾಲಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಬಂದಿದ್ದರೆ, ಇಲಾಖಾವಾರು, ಜಿಲ್ಲಾವಾರು ಮಂಜೂರಾದ ಹುದ್ದೆಗಳು, ಭರ್ತಿಯಾಗಿರುವ ಹುದ್ದೆಗಳು ಹಾಗೂ ಖಾಲಿ ಉಳಿದಿರುವ ಹುದ್ದೆಗಳ (ಜಿಲ್ಲಾವಾರು, ಇಲಾಖಾವಾರು) ಸಮಗ್ರ ಮಾಹಿತಿ ಒದಗಿಸುವುದು ;

(ಆ) ಈ ಹುದ್ದೆಗಳು ಖಾಲಿ ಉಳಿದಿರುವುದರಿಂದ ಸಾರ್ವಜನಿಕರ ಕೆಲಸ ಕಾರ್ಯಗಳ/ ಅಭಿವೃದ್ಧಿ ಕಾಮಗಾರಿಗಳ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಖಾಲಿ ಉಳಿದಿರುವ ಹುದ್ದೆಗಳ ಭರ್ತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರಣೆ ನೀಡುವುದು)

## ಅಪರಾಧ ಪ್ರಕರಣಗಳಲ್ಲಿ ಹೆಚ್ಚಳ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೦೬ (೧೧೪೮) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ನಗರದಲ್ಲಿ ಅಪರಾಧ ಪ್ರಕರಣಗಳು ಜಾಸ್ತಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ೨೦೧೩ ಜನವರಿಯಿಂದ, ಡಿಸೆಂಬರ್ ಮತ್ತು ೨೦೧೪ ಜನವರಿಯಿಂದ ಜೂನ್‌ವರೆಗಿನ ವಿವಿಧ ಪ್ರಕರಣಗಳ ವಿವರ ಒದಗಿಸುವುದು ; (ಪೊಲೀಸ್ ಠಾಣೆವಾರು)

(ಆ) ಹೊಯ್ಸಳ ಗಸ್ತು ವಾಹನಗಳನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ;

(ಇ) ಸಂಚಾರ ದಟ್ಟಣೆಯ ನಿರ್ವಹಣೆಗೆ ಕೈಗೊಂಡಿರುವ ಕ್ರಮಗಳೇನು ; ಸಣ್ಣಪುಟ್ಟ ಸಂಚಾರ ಉಲ್ಲಂಘನೆ ಪ್ರಕರಣಗಳಿಗೆ ಯದ್ವಾತದ್ವಾ ದಂಡ ವಿಧಿಸುತ್ತಿದ್ದು, ಈ ಬಗ್ಗೆ ಸಾರ್ವಜನಿಕರು ವಿರೋಧಿಸುತ್ತಿರುವುದು ಗಮನಕ್ಕೆ ಬಂದಿದೆಯೇ ;

(ಈ) ಅರಮನೆ ಮತ್ತು ಪ್ರವಾಸಿ ಸ್ಥಳಗಳಲ್ಲಿ ಪಾರ್ಕಿಂಗ್ ಶುಲ್ಕ ಇತ್ಯಾದಿ ವಿಚಾರಗಳಲ್ಲಿ ಪ್ರವಾಸಿಗರ ಸುಲಿಗೆ ಮಾಡುತ್ತಿದ್ದು, ಇಲ್ಲಿ ವಾಹನ ನಿಲುಗಡೆಗೆ

ಸುಸಜ್ಜಿತ ನಿಲ್ದಾಣಗಳು, ಪಾರ್ಕಿಂಗ್ ಶುಲ್ಕದ ಬಗ್ಗೆ ವಿವರ ನೀಡುವ ತ್ರಿಭಾಷಾ ಫಲಕಗಳನ್ನು ಮಾರ್ಗಸೂಚಿ ಫಲಕಗಳನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ;

(ಉ) ಮೈಸೂರು ನಗರಕ್ಕೆ ಸಂಬಂಧಿಸಿದಂತೆ ಖಾಲಿ ಇರುವ ಪೋಲೀಸ್ ಅಧಿಕಾರಿ, ಸಿಬ್ಬಂದಿ ಹಾಗೂ ಲಿಪಿಕ ಸಿಬ್ಬಂದಿ ಸಂಖ್ಯೆ ಎಷ್ಟು ; ಅವು ಯಾವುವು ? (ವಿವರ ಒದಗಿಸುವುದು)

## ಗಣಿಗಳ ಸ್ಥಗಿತದಿಂದ ಸಂಕಷ್ಟಕ್ಕೊಳಗಾಗಿರುವ ಗಣಿ ಕಾರ್ಮಿಕರು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೦೭ (೧೧೯೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಳ ವ್ಯವಹಾರ ಸ್ಥಗಿತದಿಂದ ಗಣಿ ಕಾರ್ಮಿಕರು ಸಂಕಷ್ಟಕ್ಕೊಳಗಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಗಣಿಗಳ ಸ್ಥಗಿತದಿಂದ ಸಂಕಷ್ಟಕ್ಕೊಳಗಾದ ಗಣಿ ಕಾರ್ಮಿಕರ ಸಂಖ್ಯೆ ಎಷ್ಟು ;

(ಇ) ಈವರೆಗೆ ಗಣಿ ಕಾರ್ಮಿಕರ ಸಂಕಷ್ಟ ಪರಿಹರಿಸಲು ಸರ್ಕಾರ ಏನಾದರೂ ಕ್ರಮಗಳನ್ನು ಕೈಗೊಂಡಿದೆಯೇ ? (ವಿವರ ನೀಡುವುದು)

## ವಿಧಾನಸೌಧದ ಹತ್ತಿರ ಪಾರ್ಕಿಂಗ್ ವ್ಯವಸ್ಥೆ

**ಡಾ॥ ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೨೦೮ (೧೧೩೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿಗಳ ಕಟ್ಟಡಗಳ ಆವರಣಗಳಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿ ನಿಲ್ದಾಣಕ್ಕಾಗಿ ಸ್ಥಳದ ಕೊರತೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ದಿನೇ ದಿನೇ ಹೆಚ್ಚುತ್ತಿರುವ ಕಾರು ವಾಹನಗಳ ನಿಲ್ದಾಣ ಸಮಸ್ಯೆ ನಿವಾರಿಸಲು ಸರ್ಕಾರವು ಕ್ರಮಗಳನ್ನು ಕೈಗೊಳ್ಳುವುದೆ ; ವಿಕಾಸಸೌಧದಲ್ಲಿರುವ ನಿರುಪಯುಕ್ತ ಮತ್ತು ಕೆಟ್ಟು ಹೋಗಿರುವ ವಾಹನಗಳನ್ನು ವಿಲೇ ಮಾಡಲು ಕ್ರಮವಿಡಲಾಗುವುದೆ ;

(ಇ) ಪ್ರಸ್ತುತ ನೌಕರರಿಗಾಗಿ ವಿಧಾನಸೌಧದ ಎದುರಿಗೆ ಬಿ.ಎಂ.ಟಿ.ಸಿ. ಬಸ್‌ಗಳಿಗೆ ನಿಲ್ದಾಣಕ್ಕಾಗಿ ಒದಗಿಸಿದ ಸ್ಥಳದಲ್ಲಿ ವಾಹನಗಳ ನಿಲ್ದಾಣಕ್ಕಾಗಿ ೦೩ ನೆಲಮಾಳಿಗೆಗಳನ್ನು ಮತ್ತು ಮೇಲೆ ಹೂದೋಟವನ್ನು ನಿರ್ಮಿಸಬಹುದಲ್ಲವೆ ?

## ಲೋಕಾಯುಕ್ತ ದಾಳಿ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) --**

೨೦೯ (೧೧೫೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳ ಅವಧಿಯಿಂದ ಇಲ್ಲಿಯವರೆಗೆ ಲೋಕಾಯುಕ್ತ ದಾಳಿಗೆ ಒಳಗಾದ ಐ.ಎ.ಎಸ್., ಐ.ಪಿ.ಎಸ್., ಮತ್ತು ಐ.ಎಫ್.ಎಸ್., ಸೇರಿದಂತೆ ಗ್ರೂಪ್–ಬಿ ಮತ್ತು ಸಿ ದರ್ಜೆಯ ಅಧಿಕಾರಿಗಳ ಸಂಖ್ಯೆ ಎಷ್ಟು ; (ಅವರುಗಳ ವಿವರ ನೀಡುವುದು)

(ಆ) ಇವರುಗಳಿಂದ ವಶಪಡಿಸಿಕೊಂಡಿರುವ ಆಸ್ತಿಗಳಿಗೆ ಇಂದಿನ ಮಾರುಕಟ್ಟೆ ಮೌಲ್ಯವೆಷ್ಟು ;

(ಇ) ಈ ಆರೋಪಕ್ಕೆ ಗುರಿಯಾಗಿರುವ ಅಧಿಕಾರಿಗಳು ಮತ್ತು ನೌಕರರನ್ನು ಸೇವೆಯಿಂದ ಅಮಾನತ್ತು ಮಾಡಲಾಗಿದೆಯೇ ; (ಅಮಾನತ್ತುಗೊಂಡವರ ಹೆಸರು, ಹುದ್ದೆ ವಿವರ ಒದಗಿಸುವುದು)

(ಈ) ಇಲ್ಲಿಯವರೆಗೆ ಶಿಕ್ಷೆಯಾದ ಪ್ರಕರಣವೆಷ್ಟು ? (ವಿವರ ಒದಗಿಸುವುದು)

## ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಕೊಳಚೆ ಪ್ರದೇಶಗಳು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೨೧೦ (೧೧೬೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಕೊಳಚೆ ಅಭಿವೃದ್ಧಿ ಮಂಡಳಿಯು ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಗುರುತಿಸಲಾಗಿರುವ ಒಟ್ಟು ಕೊಳಚೆ ಪ್ರದೇಶಗಳೆಷ್ಟು ;

(ಆ) ಕೊಳಚೆ ನಿರ್ಮೂಲನಾ ಮಂಡಳಿಯು ಅಧಿಕೃತಗೊಳಿಸಿರುವ ಒಟ್ಟು ಸ್ಲಂಗಳೆಷ್ಟು ;

(ಇ) ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಬರುವ ಎಲ್ಲಾ ಸ್ಲಂಗಳ ಹೆಸರು ಮತ್ತು ವಾರ್ಡ್‌ವಾರು ವಿವರ ನೀಡುವುದು ;

(ಈ) ಸರ್ಕಾರ ಇದುವರೆಗೆ ಎಷ್ಟು ಸ್ಲಂಗಳಿಗೆ ಪುನರ್ ವಸತಿ ಕಲ್ಪಿಸಲಾಗಿದೆ ; ಅಥವಾ ಅಭಿವೃದ್ಧಿಗೊಳಿಸಲಾಗಿದೆ ; ಉಳಿದ ಸ್ಲಂಗಳ ಅಭಿವೃದ್ಧಿ ಯಾವಾಗ ಮಾಡಲಾಗುವುದು ?

**ವಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಕಾ.ಸೂ. 333, ಪ್ರತಿಗಳು– 1500 – ಪಿ8